## ಹೊಸದುರ್ಗ ತಾಲ್ಲೂಕಿನ ಮೂಡ್ಲಾ ಬೋವಿ ಹಟ್ಟಿಯನ್ನು ಸರ್ಕಾರದವರು ದತ್ತು ಗ್ರಾಮವಾಗಿ ಅಂಗೀಕರಿಸುವ ಬಗ್ಗೆ

೧೦೪೦. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ವಿಶೇಷ ಘಟಕ ಯೋಜನೆಯಲ್ಲಿ ಪರಿಶಿಷ್ಟ ಜನಾಂಗದವರು ವಾಸಿಸುವ ಹಳ್ಳಿಗಳನ್ನು ಸರ್ಕಾರದವರು ದತ್ತು ಗ್ರಾಮವಾಗಿ ಅಂಗೀಕರಿಸಲು ಅನುಸರಿಸುವ ರೀತಿ ನೀತಿಗಳೇನು?

ಆ. ಹಾಗಿದ್ದಲ್ಲಿ ಹೊಸದುರ್ಗ ತಾಲ್ಲೂಕು ಮಾಡದಕೆರೆ ಹೋಬಳಿ ಮೂಡ್ಲಾಬೋವಿ ಹಟ್ಟಿಯನ್ನು ಮಂಜೂರಿನ ಸಾಲಿನಲ್ಲಿ ಸರ್ಕಾರದವರು ದತ್ತು ಗ್ರಾಮವಾಗಿ ಅಂಗೀಕರಿಸಲು ಸಾಧ್ಯವೆ ?

ಶ್ರೀ ವಿ.ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ. ದತ್ತು ಗ್ರಾಮಗಳನ್ನಾಗಿ ಆಂಗೀಕರಿಸುತ್ತಿಲ್ಲ. ಆದರೆ ಪರಿಶಿಷ್ಟ ಜಾತಿಯ ಹೆಚ್ಚು ಜನಸಂಖ್ಯೆ ಇರುವ ಗ್ರಾಮಗಳನ್ನು ಗಂಂಪು ಗ್ರಾಮಗಳನ್ನಾಗಿ ಆಯ್ಕೆ ಮಾಡಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಸದರಿ ಗ್ರಾಮಂಗಳಲ್ಲಿರುವ ಪರಿಶಿಷ್ಟ ಜಾತಿ ಕುಟುಂಬಗಳಿಗೆ ನೆರವು ಒದಗಿಸಲಾಗಂತ್ತಿದೆ.

ಆ. ಮೂಡ್ಲಾಬೋವಿ ಹಟ್ಟಿಯು ಜಾನಕಲ್ ಗ್ರಾಮದ ಮಂಜರೆ ಗ್ರಾಮ ಜಾನಕಲ್ ಗ್ರಾಮದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಹೆಚ್ಚು ಜನಸಂಖ್ಯೆ ಇಲ್ಲದಿರುವುದರಿಂದ ಮಂಜೂರಿನ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಮೂಡ್ಲಾಬೋವಿ ಹಟ್ಟಿಯನ್ನು ಗಂಂಪು ಗ್ರಾಮವನ್ನಾಗಿ ಆಯ್ಕೆ ಮಾಡಲಂ ಸಾಧ್ಯವಿಲ್ಲ.

## ಹೊಸದುರ್ಗ ತಾಲ್ಲೂಕಿನಲ್ಲಿರುವ ಕೆರೆಗಳ ಬಗ್ಗೆ

೧೦೪೩. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳಿವೆ? ಅದರಲ್ಲಿ ಹಾಲಿ ನೀರಿರುವ ಕೆರೆಗಳ ಸಂಖ್ಯೆ ಎಷ್ಟು ?

ಆ. ಇರುವ ಕೆರೆಗಳಲ್ಲಿ ಎಷ್ಟು ಕೆರೆಗಳು ದುರಸ್ಥಿಯಾಗದೆ ದುಸ್ಥಿತಿಯಲ್ಲಿವೆ ಹಾಗೂ ಇವುಗಳ ದುರಸ್ಥಿಗೆ ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಇ. ಹಾಲಿ ಇರುವ ಕೆರೆಗಳ ನೀರು ಹರಿಸಲು ಪಾಯಂ ಕಾಲುವೆ ಕಟ್ಟಲು ಸರ್ಕಾರದವರು ಉದ್ದೇಶಿಸುವರೆ?

ಈ. ಹಾಗಿದ್ದಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಹಳೇ ಕೆರೆಗಳ ಹೂಳು ತೆಗೆಯುವ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಳ್ಳಲಾಗಿದೆಯೆ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ. ೫೨ ನೀರಿರುವ ಕೆರೆಗಳು ೧೪

ಆ. ದುಸ್ಥಿತಿಯಲ್ಲಿರುವ ಕೆರೆಗಳು ಯಾವುವೂ ಇಲ್ಲ. ಆದರೂ ಕೆಲವು ದುರಸ್ಥಿ ಕೆಲಸಗಳು ಆಗತ್ಯವಿರುವ ೨೬ ಕೆರೆಗಳ ರಿಪೇರಿ ಕೆಲಸವನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುತ್ತಿದೆ.

ಇ. ನಾಲ್ಕು (೪) ಇಂಗಂ ಕೆರೆಗಳನ್ನು ಬಿಟ್ಟು ಉಳಿದ ಎಲ್ಲಾ ಕೆರೆಗಳಿಗೂ ಕಾಲುವೆಗಳು ಇವೆ.

ಈ. ಹೌದು.